


# सरयू ಸರಯೂ

ವಿದ್ಯಾಕೇಂದ್ರ ವಾರ್ತಾಪತ್ರ

**SARAYU** - Kannada Monthly Regn. No. KARKAN/2014/62363

**Vol. : 8 Issue : 8 Month - January 5123/ ಪ್ಲವ ಸಂವತ್ಸರ ಜನವರಿ 2022 ಪುಟ 8 Rs. 10/-**

Postal Regn No. PTR/136/2022-24
Licensed to Post without pre-payment
License No: SK/WPP/PTR/117/2022-24


## ಶ್ರೀರಾಮ ವಿದ್ಯಾಕೇಂದ್ರ ಕಲ್ಲಡ್ಕ – 20ನೇ ವರ್ಷದ ನವದಂಪತಿ ಸಮಾವೇಶ 19.12.2021



















ಪ್ರಸ್ತಾವನೆ: ಡಾ. ಪ್ರಭಾಕರ ಭಟ್


ಆಶಯ ಭಾಷಣ: ಶ್ರೀ ಗಜಾನನ ಪೈ


ಅನಿಸಿಕೆ: ಶ್ರೀ ಕೃಷ್ಣಪ್ಪ


ಸಮಾರೋಪ: ಶ್ರೀ ಸು.ರಾಮಣ್ಣ

ಶ್ರೀರಾಮ ವಿದ್ಯಾಕೇಂದ್ರದ ವೇದವ್ಯಾಸ ಧ್ಯಾನಮಂದಿರದಲ್ಲಿ ನಡೆದ ಈ ಸಮಾವೇಶಕ್ಕೆ ಆಗಮಿಸಿದ ಎಲ್ಲಾ ದಂಪತಿಗಳನ್ನು ಪಾದ ತೊಳೆದು, ತಿಲಕ ಹಚ್ಚಿ, ಹೂವು ನೀಡಿ, ಯಜ್ಞಕುಂಡಕ್ಕೆ ಘೃತಾಹುತಿ ಅರ್ಪಿಸಿ, ವೇದಘೋಷದೊಂದಿಗೆ ಆರತಿ ಬೆಳಗಿ ಸಭಾಂಗಣಕ್ಕೆ ಕರೆತರಲಾಯಿತು. ದಂಪತಿಗಳ ಪರಸ್ಪರ ಪರಿಚಯ, ಪತಿ–ಪತ್ನಿಯರಿಗೆ ಪ್ರತ್ಯೇಕ ಗುಂಪು ಚರ್ಚೆ, ಭೋಜನ, ಸಾಮೂಹಿಕ ಭಾವಚಿತ್ರ, ಅನಿಸಿಕೆಯ ಬಳಿಕ ಸಮಾರೋಪ ನಡೆಯಿತು. ಕೊನೆಯಲ್ಲಿ ಎಲ್ಲಾ ದಂಪತಿಗಳಿಗೆ ಸ್ಮರಣಿಕೆ ನೀಡಿ ಹರಸಲಾಯಿತು. ವೇದಿಕೆಯಲ್ಲಿ ರಾ.ಸ್ವ.ಸಂಘದ ಜ್ಯೇಷ್ಠ ಪ್ರಚಾರಕ್ ಶ್ರೀ ಸು. ರಾಮಣ್ಣ, ಸಂಸ್ಥೆಯ ಹಿರಿಯರಾದ ಡಾ. ಪ್ರಭಾಕರ ಭಟ್ ಕಲ್ಲಡ್ಕ, ಶ್ರೀ ವಸಂತ ಮಾಧವ, ಶ್ರೀ ರಮೇಶ್ ಎನ್, ಡಾ. ಕಮಲಾ ಪ್ರಭಾಕರ ಭಟ್ ಹಾಗೂ ಕುಟುಂಬ ಪ್ರಬೋಧನ್ ವಿಭಾಗ ಸಂಯೋಜಕ ಶ್ರೀ ಗಜಾನನ ಪೈ ಉಪಸ್ಥಿತರಿದ್ದರು. ಹಿರಿಯ ದಂಪತಿಗಳಾಗಿ ಕುಂದಾಪುರದ ಶ್ರೀ ಕೃಷ್ಣಪ್ಪ–ರಾಮಕ್ಕ ದಂಪತಿಗಳು ಭಾಗವಹಿಸಿ ಜೀವನಾನುಭವವನ್ನು ಹಂಚಿಕೊಂಡರು. ರಾಜ್ಯದ ವಿವಿಧ ಭಾಗಗಳಿಂದ 82 ಜೋಡಿ ನವದಂಪತಿಗಳು ಭಾಗವಹಿಸಿದ್ದ ಈ ಕಾರ್ಯಕ್ರಮದ ಒಟ್ಟು ವ್ಯವಸ್ಥೆಯನ್ನು ಶಿಶುಮಂದಿರದ ಮಾತೃಮಂಡಳಿಯ ತಾಯಂದಿರು ನಿರ್ವಹಿಸಿದುದು ವಿಶೇಷವಾಗಿತ್ತು.

**ಪೋಷಕರ ಸಮಾವೇಶ:** ಶ್ರೀರಾಮ ವಿದ್ಯಾಕೇಂದ್ರದ ವಿವಿಧ ವಿಭಾಗಗಳಲ್ಲಿ ನಡೆದ ಪೋಷಕರ ಸಮಾವೇಶದಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ, ಗುಣನಡತೆಗಳಲ್ಲಿ ತೋರುತ್ತಿರುವ ಬದಲಾವಣೆ, ಹೆತ್ತವರು ವಹಿಸಬೇಕಾದ ಎಚ್ಚರಿಕೆ, ಮೇಲ್ಪಂಕ್ತಿ ಇತ್ಯಾದಿಗಳ ಸಮಗ್ರ ಚರ್ಚೆ – ಅವಲೋಕನ ನಡೆಯಿತು. ಡಾ. ಪ್ರಭಾಕರ ಭಟ್ ಮಾರ್ಗದರ್ಶನ ಮಾಡಿದರು. ಅಧ್ಯಕ್ಷರು, ಸಂಚಾಲಕರು, ಸಹಸಂಚಾಲಕರು, ವಿಭಾಗ ಪ್ರಮುಖರು ಹಾಗೂ ಅಭಿವೃದ್ದಿ ಸಮಿತಿ ಅಧ್ಯಕ್ಷರು, ಪದಾಧಿಕಾರಿಗಳು , ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.


ಪ್ರೌಢಶಾಲೆ 15.12.2021


ಪ್ರಾಥಮಿಕ ಶಾಲೆ 23.12.2021


ಪದವಿಪೂರ್ವ 30.12.2021







**ಸೇವಾದಿನ 24.12.21 :** ಅಜಿತ್ ಕುಮಾರ್‌ರವರ ಪುಣ್ಯ ತಿಥಿಯ ಪ್ರಯುಕ್ತ ವಿವಿಧ ಶಿಶುಮಂದಿರಗಳಲ್ಲಿ (ಶ್ರೀರಾಮ ಕಲ್ಲಡ್ಕ, ಶ್ರೀ ಗಣೇಶ ಬೊಂಡಾಲ, ಶ್ರೀಕೃಷ್ಣ ಕಂದೂರು ಸಜಿಪ, ಶ್ರೀ ಅಕ್ಕಮಹಾದೇವಿ ಬಿ.ಸಿರೋಡ್) ಶ್ರೀಮತಿ ಸತ್ಯವತಿ, ಶ್ರೀಮತಿ ಮಲ್ಲಿಕಾ, ಶ್ರೀ ಲಕ್ಷ್ಮೀನಾರಾಯಣ ಭಟ್, ಶ್ರೀಮತಿ ಮಣಿಮಾಲ ಉಪಸ್ಥಿತರಿದ್ದು ಶ್ರೀ ಅಜಿತ್ ಕುಮಾರ್‌ರವರ ಜೀವನ–ಸಾಧನೆಯ ಬಗ್ಗೆ ಮಾತನಾಡಿದರು.

## ಪ್ರಾಥಮಿಕ ಶಾಲೆ




**ಬ್ಯಾಗ್ ಮತ್ತು ಪುಸ್ತಕ ವಿತರಣೆ**

1.12.21ರಂದು ಪ್ರಾಥಮಿಕ ವಿಭಾಗದ ವಿದ್ಯಾರ್ಥಿಗಳಿಗೆ ಉಚಿತ ಬ್ಯಾಗ್ ಮತ್ತು ಪುಸ್ತಕವನ್ನು ಮುಖ್ಯೋಪಾಧ್ಯಾಯರಾದ ಶ್ರೀ ರವಿರಾಜ್ ಕಣಂತೂರು ವಿತರಿಸಿದರು.



**ಕೃಷಿ ಚಟುವಟಿಕೆಯಲ್ಲಿ ಭಾಗಿ 3.12.21**

ಸುಧೆಕ್ಕಾರ್‌ನ ಹೊಲದಲ್ಲಿ ಬೆಳೆದ ಭತ್ತದ ತೆನೆ ಬಿಡಿಸುವ ಕಾರ್ಯಾನುಭವವನ್ನು ಶಾಲಾಭಿವೃದ್ಧಿ ಸದಸ್ಯರಾದ ಶ್ರೀ ಜಯರಾಮ ಸುಧೆಕ್ಕಾರು ಇವರಿಂದ ಪಡೆದುಕೊಂಡರು.




**ವಿಶ್ವ ಮಣ್ಣಿನ ದಿನಾಚರಣೆ 6.12.21**

ಮಣ್ಣಿನ ಮಹತ್ವವನ್ನು ಶ್ರೀ ಸುಮಂತ್ ಆಳ್ವ ತಿಳಿಸಿಕೊಟ್ಟರು. ವೇದಿಕೆಯಲ್ಲಿ ಹ್ಯಾಪಿ ಹೆಲ್ತ್ ಪ್ರೈ.ಲಿ.ನ ಶ್ರೀ ಹೊನ್ನಪ್ಪ, ವೇದಾವತಿ, ವಿದ್ಯಾ, ಶೋಭಾ, ಸರಸ್ವತಿ, ಪ್ರಮೋದ್ ಕುಮಾರ್ ಮತ್ತು ವಿಭಾಗ ಮುಖ್ಯಸ್ಥರು ಉಪಸ್ಥಿತರಿದ್ದರು.




**ನಿವೃತ್ತ ಸೇನಾಧಿಕಾರಿ, ಕುಟುಂಬಸ್ಥರ ಭೇಟಿ**

11.12.21 ರಂದು ನಿವೃತ್ತ ಸೇನಾಧಿಕಾರಿ ಶ್ರೀ ಕರ್ನಲ್ ಕೆ.ಟಿ ನಾಯಕ್, ಶ್ರೀಮತಿ ಕುಸುಮಾವತಿ ಕೆ.ಟಿ ನಾಯಕ್, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ವ್ಯವಸ್ಥಾಪಕ ಶ್ರೀ ಅಜಿತ್ ಕುಮಾರ್, ಶ್ರೀಮತಿ ರಶ್ಮಿ, ಕ.ಗ್ರಾ.ವಿ.ಬ್ಯಾಂಕ್‌ನ ವ್ಯವಸ್ಥಾಪಕ ಶ್ರೀ ಅಜಯ್ ಕುಮಾರ್, ಶ್ರೀಮತಿ ಜಯಶ್ರೀ, ಶ್ರೀ ಕೃಷ್ಣ ನಾಯಕ್ ಅಳಕೆ ಮಜಲು, ಶ್ರೀಮತಿ ರತ್ನಾವತಿ, ಶ್ರೀ ಕಿರಣ್‌ರಾಜ್ ಉಪಸ್ಥಿತರಿದ್ದರು.




**ಮೋದಿ ಬ್ರಿಗೇಡ್ ನಿಯೋಗ ಭೇಟಿ 13.12.21**

ಬ್ರಿಗೇಡ್‌ನ ರಾಜ್ಯಾಧ್ಯಕ್ಷ ಶಿವಮೊಗ್ಗದ ಶ್ರೀ ಗಣೇಶ್, ಪ್ರ.ಕಾರ್ಯದರ್ಶಿ ಶ್ರೀಮತಿ ಗೀತಾ ಪ್ರಭು, ಕಾರ್ಯದರ್ಶಿ ಶ್ರೀ ಸುಭಾಷ್‌ಚಂದ್ರ ಹೆಗಡೆ, ಜೈಕರ್ನಾಟಕ ಜಿಲ್ಲಾಧ್ಯಕ್ಷರು ಶ್ರೀ ಸುರೇಶ್ ಶೆಟ್ಟಿ ಪೂನಾ, ಶ್ರೀ ಕಿಶೋರ್ ಮಂಗಳೂರು, ಶ್ರೀ ರೋಹಿತ್ ಹೆಗಡೆ ಕಾಪು, ಎಸ್.ಡಿ.ಪಿ ಅಧ್ಯಕ್ಷರು ಶ್ರೀ ಸತೀಶ್ ಶೆಟ್ಟಿ ಕುಂದಾಪುರ ಹಾಗೂ ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.



**ಗೀತಾಜಯಂತಿ 16.12.21**

ಸಂಸ್ಕೃತ ಸಪ್ತಾಹದ ಪ್ರಯುಕ್ತ ತರಗತಿವಾರು ನಡೆದ ಸಂಸ್ಕೃತ ಗೀತ ಗಾಯನ, ಗೀತಾ ಪಠಣ, ಸಂಸ್ಕೃತ ಪ್ರದರ್ಶಿನಿ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಹಾಗೂ ಇದೇ ಸಂದರ್ಭದಲ್ಲಿ ಭಗವದ್ಗೀತೆಯ 12ನೇ ಅಧ್ಯಾಯದ ಸಾಮೂಹಿಕ ಪಠಣ, ವೈದೇಹಿ ಇವಳಿಂದ ಸಂಸ್ಕೃತ ಗೀತ ಗಾಯನ ನಡೆಯಿತು. ಶ್ರೀಮತಿ ಸುಧಾಭಟ್ ಉಪಸ್ಥಿತರಿದ್ದರು.



**ಭಜನೆ – ಸಾಮೂಹಿಕ ಹುಟ್ಟುಹಬ್ಬ 18.12.21**

ಸೆಪ್ಟೆಂಬರ್‌ನಿಂದ ಡಿಸೆಂಬರ್ ತಿಂಗಳವರೆಗಿನ ಹುಟ್ಟುಹಬ್ಬ ಆಚರಣೆಯಲ್ಲಿ ಗಮಕ ವಾಚಕಿ ಶ್ರೀಮತಿ ಮಂಜುಳಾ ಹುಟ್ಟುಹಬ್ಬದ ಮಹತ್ವವನ್ನು ತಿಳಿಸಿದರು. ವೇದಿಕೆಯಲ್ಲಿ ಹಿಂದೂ ಸಂಘಟನೆಗಳ ಪ್ರಮುಖ ಕಾರ್ಯಕರ್ತರು, ಹಿರಿಯ ವಿದ್ಯಾರ್ಥಿಗಳು, ಶಾಲಾಭಿವೃದ್ಧಿ ಸಮಿತಿ ಸದಸ್ಯರು ಉಪಸ್ಥಿತರಿದ್ದರು.



**ಹುಣಸೆ ಹಣ್ಣಿನ ಮಿಠಾಯಿ ಪ್ರಾತ್ಯಕ್ಷಿಕೆ 22.12.21**

5ನೇ ತರಗತಿಯ ಕನ್ನಡ ಪಠ್ಯ ವಿಷಯದಲ್ಲಿರುವ "ನಾನು ಮತ್ತು ಹುಂಚಿಮರ" ಪಾಠದಲ್ಲಿನ ಹುಂಚಿಮರದ ಉಪಯೋಗ ತಿಳಿಸಿಕೊಡುವ ಸಲುವಾಗಿ ಮಿಠಾಯಿ ತಯಾರಿಸುವ ಪ್ರಾತ್ಯಕ್ಷಿಕೆಯನ್ನು ವಿಷಯ ಅಧ್ಯಾಪಕರು ನಡೆಸಿದರು. 195 ವಿದ್ಯಾರ್ಥಿಗಳು ಮಿಠಾಯಿ ತಯಾರಿಸಿ ಸವಿದರು.



**ರಾಷ್ಟ್ರೀಯ ಗಣಿತ ದಿನ 22.12.21**

ಗಣಿತ ಸಂಘದಿಂದ ಶ್ರೀನಿವಾಸ ರಾಮಾನುಜನ್‌ರ ಜನ್ಮದಿನವನ್ನು ಆಚರಿಸಲಾಯಿತು. ಪ್ರೌಢಶಾಲೆಯ ಗಣಿತ ಅಧ್ಯಾಪಕರು, ವೇದಗಣಿತದ ಸಂಪನ್ಮೂಲ ವ್ಯಕ್ತಿ ಶ್ರೀಮತಿ ವಿನುತ, ಮತ್ತು ಶ್ರೀಮತಿ ಸಂಗೀತ ಸಿಂಗೇರಿ ತೋಟ, ಶ್ರೀಮತಿ ಮಮತಾ ಪರ್ಲೊಟ್ಟು, ಶಿಕ್ಷಕರು ಮುಖ್ಯಸ್ಥರು ಉಪಸ್ಥಿತರಿದ್ದರು.

# ಸುಭಾಷಿತ ಮಂಜರಿ

ಧತ್ತೇ ಭರಂ ಕುಸುಮಪತ್ರಫಲಾವಲೀನಾಂ
ಘರ್ಮವ್ಯಥಾಂ ವಹತಿ ಶೀತಭವಾಂ ರುಜಂ ಚ।
ಯೋ ದೇಹಮರ್ಪಯತಿ ಚಾನ್ಯಸುಖಸ್ಯ ಹೇತೋಃ
ತಸ್ಮೈವದಾನ್ಯಗುರವೇ ತರವೇ ನಮೋऽಸ್ತು ॥

ಹೂ, ಎಲೆ, ಹಣ್ಣುಗಳ ಭಾರವನ್ನು ಹೊರುತ್ತದೆ. ಬೇಸಗೆಯ ಬೇಗೆಯನ್ನು, ಚಳಿಯ ಬಾಧೆಯನ್ನೂ ಸಹಿಸುತ್ತದೆ. ಬೇರೆಯವರ ಸುಖ–ಕ್ಕಾಗಿ ತನ್ನ ಶರೀರವನ್ನೂ ಅರ್ಪಿಸುತ್ತದೆ. ಇಂತಹ ದಾನವೀರನಾದ ವೃಕ್ಷಕ್ಕೆ ನಮಸ್ಕಾರ.

### ಸಂಪಾದಕೀಯ

ಆತ್ಮೀಯ ಓದುಗರೆ,

ಸಾಮಾನ್ಯವಾಗಿ ಸಪ್ಟೆಂಬರ್ ತಿಂಗಳಿನಲ್ಲಿ ನಡೆಯುತ್ತಿದ್ದ ನಮ್ಮ ಸಂಸ್ಥೆಯ ವೈಶಿಷ್ಟ್ಯಪೂರ್ಣ ಕಾರ್ಯಕ್ರಮ ನವದಂಪತಿ ಸಮಾವೇಶ ಈ ಬಾರಿ ದಶಂಬರ ತಿಂಗಳಿನಲ್ಲಿ ನಡೆಯಿತು. ಇದರ ಸಚಿತ್ರ ವರದಿ ಮುಖಪುಟದಲ್ಲಿದೆ. ಇದರೊಂದಿಗೆ ಕಳೆದ ಒಂದು ವರ್ಷದ ಅವಧಿಯಲ್ಲಿ ವಾರ್ಷಿಕವಾಗಿ ನಮ್ಮಲ್ಲಿ ನಡೆಯುತ್ತಿದ್ದ ಕಾರ್ಯಕ್ರಮಗಳು ಒಂದೊಂದಾಗಿ ಆರಂಭವಾಗತೊಡಗಿದೆ.

ಈ ಮಧ್ಯೆ ನಮ್ಮ ಸಂಸ್ಥೆಗೂ ಮಾತೃಸಂಸ್ಥೆಯಾದ ಪುತ್ತೂರಿನ ವಿವೇಕಾನಂದ ವಿದ್ಯಾವರ್ಧಕ ಸಂಘದ ಪದವಿ ಕಾಲೇಜಿನ ಸಂಸ್ಥಾಪಕರಲ್ಲೋರ್ವರಾದ ಶ್ರೀ ಉರಿಮಜಲು ರಾಮಭಟ್ ಇವರು ನಮ್ಮನ್ನಗಲಿದ್ದಾರೆ. ಇವರಿಗೆ ಶ್ರೀರಾಮ ವಿದ್ಯಾಕೇಂದ್ರದ ವತಿಯಿಂದ ಭಾವಪೂರ್ಣ ಶ್ರದ್ಧಾಂಜಲಿ.

ಸಂಪಾದಕ ಬಳಗ


### ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ಪೂರ್ಣಿಮಾ (ಶಿಶುಮಂದಿರ)
ಚೈತ್ರ ಬಿ.ಕೆ (ಪ್ರಾಥಮಿಕ ಶಾಲೆ)
ಕೊಟ್ರೇಶ್ (ಪ್ರೌಢಶಾಲೆ)
ಲತಾ (ಪದವಿಪೂರ್ವ)
ಅಖಿಲಾ (ಪದವಿ)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಮೂರು


## ಕಥನ 30

ಶ್ರೀರಾಮ ವಿದ್ಯಾಕೇಂದ್ರ
# ಕಥನವಾಹಿನಿ


ನಿರೂಪಣೆ
ಡಾ। ಪ್ರಭಾಕರ ಭಟ್, ಕಲ್ಲಡ್ಕ



(ವಿದ್ಯಾಕೇಂದ್ರದ ಚಿಂತನೆಯ ಮೂಲ, ಹುಟ್ಟು, ಬೆಳವಣಿಗೆ – ಸವಾಲುಗಳ ಕಥೆ)

## ಪದವಿ ವಿದ್ಯಾಲಯದ ಹುಟ್ಟು–ಬೆಳವಣಿಗೆ – 3

2014ನೇ ವರ್ಷದಲ್ಲಿ ಪದವಿ ವಿಭಾಗಕ್ಕೆ ಪ್ರತ್ಯೇಕ ಕಟ್ಟಡ ನಿರ್ಮಿಸುವ ಯೋಜನೆಯನ್ನು ಹಾಕಿಕೊಳ್ಳಲಾಯಿತು. ದಿನಾಂಕ 3.2.2014ರಂದು ಒಡಿಯೂರಿನ ಶ್ರೀಶ್ರೀ ಗುರುದೇವಾನಂದ ಸ್ವಾಮೀಜಿಯವರು ಭೂಮಿ ಪೂಜೆಯನ್ನು ನೆರವೇರಿಸಿದರು. ಸುಮಾರು 5 ಮಹಡಿಗಳ 25ಸಾವಿರ ಚದರ ಅಡಿಗಳಿಗೂ ಅಧಿಕ ವೈಶಾಲ್ಯತೆಯ ಭವನದ ನೀಲ ನಕ್ಷೆ ಸಿದ್ಧವಾಯಿತು. ಹಾಗೂ ಕಟ್ಟಡದ ಕಾಮಗಾರಿಯನ್ನು ಆರಂಭಿಸಲಾಯಿತು.

ಅದೇ ಶೈಕ್ಷಣಿಕ ವರ್ಷದಲ್ಲಿ ಬಿ.ಬಿ.ಎಂ.ನ ಬದಲಾಗಿ ಬಿ.ಎ ತರಗತಿಗಳನ್ನು ಆರಂಭಿಸಲಾಯಿತು. ವರ್ಷಗಳು ಕಳೆದಂತೆ ವಿದ್ಯಾರ್ಥಿಗಳ ಅಪೇಕ್ಷೆ, ಉದ್ಯೋಗಾವಕಾಶದ ಮೇಲೆ ಕೋರ್ಸುಗಳಿಗೆ ದಾಖಲಾಗುವ ಆಸಕ್ತಿಯಲ್ಲೂ ಬದಲಾವಣೆಯಾಗುತ್ತಿರುವುದನ್ನು ಮನಗಂಡು ಈ ನಿರ್ಧಾರಕ್ಕೆ ಬರಲಾಯಿತು.

2015ನೇ ಇಸವಿಯ ಹೊತ್ತಿಗೆ ಅಂದಿನ ಅಗತ್ಯಕ್ಕೆ ತಕ್ಕಷ್ಟು ಕಟ್ಟಡದ ರಚನೆ ಹಾಗೂ ಭಾಗಶಃ ಕೆಲಸ ಮುಕ್ತಾಯಗೊಂಡಿತು. ಭಾರತ ಸರ್ಕಾರದ ಹೆದ್ದಾರಿ ಮತ್ತು ಸಾರಿಗೆ ಸಚಿವರಾದ ಶ್ರೀ ನಿತಿನ್ ಗಡ್ಕರಿ ಇವರು ವಿದ್ಯಾಸಂಸ್ಥೆಯ ಬಹುದೊಡ್ಡ ವಾರ್ಷಿಕ ಕಾರ್ಯಕ್ರಮ ಕ್ರೀಡೋತ್ಸವಕ್ಕೆ ಬರುವವರಿದ್ದರು. ಇದೇ ಸಂದರ್ಭದಲ್ಲಿ ದಿನಾಂಕ 15.12.2015ಕ್ಕೆ ಲಕ್ಷ್ಮೀಬಾಯಿ ಹೆಸರಿನ ಕಟ್ಟಡ ಲೋಕಾರ್ಪಣೆಗೊಂಡಿತು. ವಂದನೀಯ ಲಕ್ಷ್ಮೀಬಾಯಿ ಕೇಳ್ಕರ್ ಮತ್ತು ಝಾನ್ಸಿ ರಾಣಿ ಲಕ್ಷ್ಮೀಬಾಯಿ ಇವರೀರ್ವರ ನೆನಪಿನಲ್ಲಿ ಈ ಹೆಸರನ್ನು ಇಡಲಾಯಿತು.






2017–18ನೇ ಶೈಕ್ಷಣಿಕ ವರ್ಷದಲ್ಲಿ ನಮ್ಮ ಸಂಖ್ಯೆ 370ನ್ನು ದಾಟಿತ್ತು. ಅದರಲ್ಲಿ ಬಹುತೇಕ ಹೆಣ್ಣು ಮಕ್ಕಳೇ ಪದವಿ ಶಿಕ್ಷಣಕ್ಕೆ ಇಲ್ಲಿ ಆಗಮಿಸುತ್ತಿದ್ದು, ಅಷ್ಟೇ ಪ್ರಮಾಣದಲ್ಲಿ ಮಾತಾಜಿಯರ ಸಂಖ್ಯೆಯನ್ನು ಇರುವಂತೆ ನೋಡಿಕೊಳ್ಳಲಾಯಿತು. ಅಗತ್ಯಕ್ಕೆ ತಕ್ಕಂತೆ ಒಂದೊಂದಾಗಿ ವ್ಯವಸ್ಥೆಗಳು ರೂಪುಗೊಳ್ಳತೊಡಗಿದವು.

ಕಾಲೇಜಿನ ದಶಮಾನೋತ್ಸವಕ್ಕೂ ಮೊದಲೇ 2017–18ರಲ್ಲಿ ಬಿ.ಎಸ್ಸಿ. ಕೋರ್ಸನ್ನು ಆರಂಭಿಸಲಾಯಿತು. ಅದಕ್ಕೆ ತಕ್ಕಂತೆ ಪ್ರಯೋಗಾಲಯಗಳು, ಪ್ರಾಧ್ಯಾಪಕರ ನೇಮಕಾತಿಗಳು ನಡೆಯಿತು. ವಿಜ್ಞಾನ, ವಾಣಿಜ್ಯ, ಕಲಾ ವಿಭಾಗಗಳಲ್ಲಿ ಪದವಿ ಪಡೆಯುವ ಆಕಾಂಕ್ಷಿಗಳಿಗೆ ಒಂದೇ ಸೂರಿನಡಿ ವ್ಯವಸ್ಥೆ ಕಲ್ಪಿಸಬೇಕೆಂಬ ಬಹು ದಿನಗಳ ಆಶಯ ನೆರವೇರಿದಂತಾಯಿತು.

2019–20ನೇ ಶೈಕ್ಷಣಿಕ ವರ್ಷ ಕಾಲೇಜಿನ ದಶಮಾನೋತ್ಸವದ ವರ್ಷ. ಎಲ್ಲವೂ ನಿರೀಕ್ಷೆಯಂತೆ ನಡೆದು ಇನ್ನೇನು ದಶಮಾನೋತ್ಸವದ ಕೊನೆಯ ಹಂತದಲ್ಲಿರುವಾಗ 2020 ಮಾರ್ಚ್‌ನಲ್ಲಿ ಕೋವಿಡ್ 19ರ ಕರಾಳ ಛಾಯೆ ಲೋಕವನ್ನಾವರಿಸಿದಂತೆ ನಮ್ಮನ್ನೂ ಬಾಧಿಸಿತು. ಯೋಜಿತ ಕಾರ್ಯಕ್ರಮಗಳೆಲ್ಲ ರದ್ದಾಗಿ ಆ ಶೈಕ್ಷಣಿಕ ವರ್ಷ ಸುದೀರ್ಘ ಒಂದೂವರೆ ವರ್ಷಕ್ಕೂ ಮೀರಿ ಮುಂದುವರೆಯಿತು. ಪ್ರಸ್ತುತ 2021–22ನೇ ಶೈಕ್ಷಣಿಕ ವರ್ಷದಲ್ಲಿ ಬಿ.ಸಿ.ಎ ಎಂಬ ಹೊಸ ಕೋರ್ಸ್‌ನೊಂದಿಗೆ ಪದವಿ ತರಗತಿಗಳು ನೂತನ ರಾಷ್ಟ್ರೀಯ ಶಿಕ್ಷಣ ನೀತಿಗೆ ಅನುಸಾರವಾಗಿ ನಡೆಯುತ್ತಿದೆ.

ಮುಂದುವರೆಯುವುದು...

**ನವದಂಪತಿ ಸಮಾವೇಶ ವ್ಯವಸ್ಥಾ ಬೈಠಕ್ 3.12.21**

ನವದಂಪತಿ ಸಮಾವೇಶದ ಜವಾಬ್ದಾರಿ ಹಂಚಿಕೆ ಬೈಠಕ್ ಮಧುಕರ ಸಭಾಂಗಣದಲ್ಲಿ ನಡೆಯಿತು. ಡಾ.ಪ್ರಭಾಕರ ಭಟ್ ಇವರು ನವದಂಪತಿ ಸಮಾವೇಶದ ಬಗ್ಗೆ ಮಾಹಿತಿಯನ್ನು ನೀಡಿ-ದರು. ಜವಾಬ್ದಾರಿಗಳ ವಿವರವನ್ನು ಭ.ಗಂಗಾ ತಿಳಿಸಿದರು. ಸಂಚಾಲಕರು, ಸಹಸಂಚಾಲಕರು ಉಪಸ್ಥಿತರಿದ್ದರು. 74 ಜನ ಭಾಗವಹಿಸಿದ್ದರು.

**ಕಾರ್ಯಾಗಾರ 28.12.21**

ಶ್ರೀರಾಮ ಶಿಶುಮಂದಿರ ಕಲ್ಲಡ್ಕದಲ್ಲಿ ಹೊಸದಾಗಿ ಸೇರ್ಪಡೆಯಾದ ಮಕ್ಕಳ ಪಾಲಕರಿಗೆ ಆಟಿಕೆಗಳ ಬಗ್ಗೆ ಪ್ರತ್ಯಕ್ಷ ಮಾಹಿತಿಯನ್ನು ನೀಡುವುದರೊಂದಿಗೆ ಕಾರ್ಯಾಗಾರವನ್ನು ಭ.ಗಂಗಾ ಮಾತಾಜಿ ನಡೆಸಿಕೊಟ್ಟರು. 42 ಪಾಲಕರು ಭಾಗವಹಿಸಿದ್ದರು.

**ಸಾಮೂಹಿಕ ಹುಟ್ಟುಹಬ್ಬ 31.12.21**

ಡಿಸೆಂಬರ್ ತಿಂಗಳಲ್ಲಿ ಹುಟ್ಟಿದ ಮಕ್ಕಳ ಹುಟ್ಟುಹಬ್ಬ ಕಾರ್ಯಕ್ರಮದಲ್ಲಿ ತಾಯಂದಿರು ಪುಟಾಣಿಗಳಿಗೆ ಆರತಿ ಬೆಳಗಿ, ತಿಲಕ ಇಟ್ಟು, ಅಕ್ಷತೆ ಹಾಕಿ, ಸಿಹಿ ನೀಡಿ ಶುಭ ಹಾರೈಸಿದರು. ಶಿಶುಮಂದಿರದ ಆಡಳಿತ ಮಂಡಳಿ ವ್ಯವಸ್ಥಾಪಕರಾದ ಶ್ರೀಮತಿ ಸುಧಾ ಭಟ್ ಹುಟ್ಟುಹಬ್ಬ ಆಚರಣೆಯ ಬಗ್ಗೆ ತಿಳಿಸಿದರು.

## ಪ್ರಾಥಮಿಕ ಶಾಲೆ

**ಸುರಕ್ಷಾ ಸಪ್ತಾಹ ಕಾರ್ಯಾಗಾರ**

3.12.21 ರಂದು ಹೆಣ್ಣುಮಕ್ಕಳು ಪ್ರೌಢಾವಸ್ಥೆಗೆ ಬಂದಾಗ ದೇಹದಲ್ಲಿ ಆಗುವ ಬದಲಾವಣೆ, ದೈಹಿಕ ಹಾಗೂ ಮಾನಸಿಕ ಸ್ವಚ್ಛತೆ, ಅಪರಿಚಿತರೊಂದಿಗೆ ತಮ್ಮ ವರ್ತನೆ, ಮಾನಸಿಕ ನಿಯಂತ್ರಣದ ಬಗ್ಗೆ ಶ್ರೀಮತಿ ಅನ್ನಪೂರ್ಣ ಇವರು ತಿಳಿಸಿಕೊಟ್ಟರು. ಹೆಣ್ಣುಮಕ್ಕಳ ಸುರಕ್ಷಾ ಸಮಿತಿಯ ಶ್ರೀಮತಿ ರಾಜೇಶ್ವರಿ ಹಾಗೂ ಶ್ರೀಮತಿ ದೇವಿಕಾ ಉಪಸ್ಥಿತರಿದ್ದರು.

**ಕನ್ನಡ ಗೀತೆ ಸ್ಪರ್ಧೆ 4.12.21**

ಕನ್ನಡ ಪಠ್ಯಪುಸ್ತಕದ ಹಾಡನ್ನು ತರಗತಿವಾರು ಹಾಡುವ ಸ್ಪರ್ಧೆ ಆಯೋಜಿಸಿದ್ದು, ವಿಜೇತ ತಂಡ-ಕ್ಕೆ ಮುಖ್ಯೋಪಾಧ್ಯಾಯರಾದ ಶ್ರೀ ರವಿರಾಜ್ ಕಣಂತೂರು ಬಹುಮಾನ ವಿತರಿಸಿದರು.

**ಗ್ರಂಥಾಲಯ ಭೇಟಿ 9.12.21**



ಪಾಠ ಪೂರಕ ಚಟುವಟಿಕೆಯಾಗಿ 3ನೇ ತರಗತಿಯ 187 ವಿದ್ಯಾರ್ಥಿಗಳು ಶ್ರೀರಾಮ ಪದವಿಪೂರ್ವ ವಿಭಾಗದ ಗ್ರಂಥಾಲಯಕ್ಕೆ ಭೇಟಿಯಿತ್ತರು. ಗ್ರಂಥಪಾಲಕರಾದ ಶ್ರೀ ಉದಯ ಹಾಗೂ ಪೂರ್ವಗುರುಕುಲದ ಪ್ರಮುಖರಾದ ಶ್ರೀಮತಿ ರೂಪಕಲಾ ಎಂ. ಗ್ರಂಥಾಲಯದ ಬಗ್ಗೆ ಮಾಹಿತಿ ನೀಡಿದರು.

**ನಿವೃತ್ತ ಸೇನಾಧಿಕಾರಿ, ಕುಟುಂಬಸ್ಥರ ಭೇಟಿ 11.12.21**

ನಿವೃತ್ತ ಸೇನಾಧಿಕಾರಿ ಶ್ರೀ ಕರ್ನಲ್ ಕೆ.ಟಿ ನಾಯಕ್ ಹಾಗೂ ಅವರ ಕುಟುಂಬಸ್ಥರು ವಿದ್ಯಾಕೇಂದ್ರಕ್ಕೆ ಭೇಟಿ ನೀಡಿ 4000 ವಿದ್ಯಾರ್ಥಿಗಳಿಗೆ ಭೋಜನದ ವ್ಯವಸ್ಥೆ ಮಾಡಿದರು. ಹಾಗೂ ತಾವುಗಳು ವಿದ್ಯಾರ್ಥಿಗಳ ಜೊತೆ ಸೇರಿ ಭೋಜನ ಸವಿದರು. ಡಾ। ಪ್ರಭಾಕರ್ ಭಟ್ ಕಲ್ಲಡ್ಕ, ಶ್ರೀ ವಸಂತ ಮಾಧವ, ವಿಭಾಗ ಮುಖ್ಯಸ್ಥರು ಉಪಸ್ಥಿತರಿದ್ದರು.

**ಅಧ್ಯಾಪಕರ ಬೈಠಕ್ 11.12.21**

ಮುಖ್ಯೋಪಾಧ್ಯಾಯರ ಉಪಸ್ಥಿತಿಯಲ್ಲಿ ಎಲ್ಲಾ ಅಧ್ಯಾಪಕರ ಬೈಠಕ್ ಅರುಂಧತಿ ಕೊಠಡಿಯಲ್ಲಿ ನಡೆಯಿತು. ಶಾಲಾ ಶೈಕ್ಷಣಿಕ ಚಟುವಟಿಕೆ, ಮನೆಭೇಟಿ ಕುರಿತು ಚರ್ಚಿಸಲಾಯಿತು.

**ಸವಿರುಚಿ-ಕೋಸಂಬರಿ ಪ್ರಾತ್ಯಕ್ಷಿತೆ 16.12.21**

ಪಾಠ ಪೂರಕ ಚಟುವಟಿಕೆಯಾಗಿ ಕೋಸಂಬರಿ ತಯಾರಿಸುವುದರ ಮೂಲಕ ಆಹಾರದಲ್ಲಿ ಪೌಷ್ಟಿಕಾಂಶದ ಬಗ್ಗೆ ವಿದ್ಯಾರ್ಥಿಗಳಿಗೆ ಶ್ರೀಮತಿ ರೂಪಕಲಾ ಮಾತಾಜಿ ಮಾಹಿತಿ ನೀಡಿದರು. ಶ್ರೀ ರವಿರಾಜ್ ಶ್ರೀಮಾನ್ ಉಪಸ್ಥಿತರಿದ್ದರು.

**ರಾಜ್ಯಮಟ್ಟಕ್ಕೆ ಆಯ್ಕೆ**

ಗೀತಾಜಯಂತಿ ಪ್ರಯುಕ್ತ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನ ಆಯೋಜಿಸಿದ ಜಿಲ್ಲಾ ಮಟ್ಟದ ಶ್ರೀಮದ್ಭಗವದ್ಗೀತಾ ಕಂಠಪಾಠ ಸ್ಪರ್ಧೆಯಲ್ಲಿ 6ನೇ ತರಗತಿಯ ಶ್ರೀವತ್ಸ ದ್ವಿತೀಯ ಸ್ಥಾನ ಹಾಗೂ 7ನೇ ತರಗತಿಯ ಕೃತಿಕಾ ಭಾಷಣ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

**ಸಂವಿತ್ ಯೋಗ ತರಬೇತಿ ದ. 16, 17.12.21**

ಸಂವಿತ್ ಸಂಶೋಧನಾ ಸಂಸ್ಥೆ ಬೆಂಗಳೂರು ಇದರ ವತಿಯಿಂದ, ವಿವೇಕಾನಂದ ಸೆಂಟ್ರಲ್ ಸ್ಕೂಲ್ ನೆಹರು ನಗರ ಇಲ್ಲಿ ನಡೆದ ಯೋಗ ಶಿಕ್ಷಕರ ಎರಡು ದಿನದ ಕಾರ್ಯಾಗಾರದಲ್ಲಿ ಅಧ್ಯಾಪಕರಾದ ಕು. ಜ್ಯೋತಿಶ್ರೀ ಹಾಗೂ ಕು. ದಕ್ಷ ಭಾಗವಹಿಸಿದರು.

**ಅಂಚೆ ಕಛೇರಿಯಿಂದ ಪ್ರಬಂಧ ಸ್ಪರ್ಧೆ 17.12.21**



ಭಾರತೀಯ ಅಂಚೆ ಕಛೇರಿ ವತಿಯಿಂದ "ಸ್ವಾತಂತ್ರ್ಯ ಹೋರಾಟದ ಅಪ್ರತಿಮ ವೀರರು" ಅಥವಾ "2047ನೇ ಇಸವಿಯಲ್ಲಿ ಭಾರತದ ಬಗ್ಗೆ ನನ್ನ ದೃಷ್ಟಿಕೋನ" ಎಂಬ ವಿಷಯದ ಬಗ್ಗೆ ಅಂಚೆ ಕಾರ್ಡಿನಲ್ಲಿ ಪ್ರಬಂಧ ಸ್ಪರ್ಧೆ ನಡೆದಿದ್ದು, ಪ್ರಾಥಮಿಕ ವಿಭಾಗದ 700 ವಿದ್ಯಾರ್ಥಿಗಳು ಭಾಗವಹಿಸಿದ್ದರು.

**ಭಜನೆ – ಸಾಮೂಹಿಕ ಹುಟ್ಟುಹಬ್ಬ 18.12.21**

ಸೆಪ್ಟೆಂಬರ್‌ನಿಂದ ಡಿಸೆಂಬರ್ ತಿಂಗಳವರೆಗೆ ಹುಟ್ಟಿದ ಎಲ್ಲಾ ಮಕ್ಕಳ ಹುಟ್ಟುಹಬ್ಬ ಆಚರಣೆಯಲ್ಲಿ ಗಮಕ ವಾಚಕಿ ಶ್ರೀಮತಿ ಮಂಜುಳಾ ಭಾಗವಹಿಸಿ ಹುಟ್ಟುಹಬ್ಬದ ಮಹತ್ವವನ್ನು ತಿಳಿಸಿದರು. ವೇದಿಕೆಯಲ್ಲಿ ಪುತ್ತೂರು ಭಜರಂಗದಳದ ಜಿಲ್ಲಾ ಸಂಚಾಲಕ ಭರತ್ ಕುಮ್ಡೇಲು, ಬಂಟ್ವಾಳ ಭಜರಂಗದಳದ ಪ್ರಖಂಡ ಸೇವಾ ಪ್ರಮುಖ್ ಕಿರಣ್ ಕುಮ್ಡೇಲು, ಕಾರ್ಯಕರ್ತರಾದ ಧನರಾಜ್ ನೇರಳಕಟ್ಟೆ, ಶ್ರೀರಾಮ ಪ್ರೌಢ ಶಾಲೆಯ ನಿವೃತ್ತ ಮುಖ್ಯೋಪಾಧ್ಯಾಯರಾದ ಶ್ರೀಮತಿ ವಸಂತಿ ಕುಮಾರಿ, ಶಾಲಾಭಿವೃದ್ಧಿ ಸಮಿತಿ ಸದಸ್ಯ ಗಂಗಾಧರ, ಬೆಂಗಳೂರಿನಲ್ಲಿರುವ ಇಂಜಿನಿಯರ್ ಶ್ರೀ ದೀಪಕ್ ನಾಯಕ್ ಹಾಗೂ ಸಹಧರ್ಮಿಣಿ ಶ್ವೇತಾ ನಾಯಕ್ ಮತ್ತು ವಿಭಾಗ ಮುಖ್ಯಸ್ಥರು ಉಪಸ್ಥಿತರಿದ್ದರು.

**ಸಂಸ್ಕೃತ ಕಥಾಕಥನ ಸ್ಪರ್ಧೆ 24.12.21**

ಶ್ರೀ ಶ್ರೀನಿವಾಸ ಪಾಠಶಾಲಾ, ಮಂಗಳೂರು ಇದರ ವತಿಯಿಂದ 6 ಮತ್ತು 7ನೇ ತರಗತಿಯವರಿಗೆ ಕಥಾಕಥನ ಸ್ಪರ್ಧೆ ನಡೆಸಲಾಯಿತು. ಕನ್ನಡದಲ್ಲಿ ಕೊಟ್ಟಿರುವ ಕಥೆಯನ್ನು ಸಂಸ್ಕೃತ ಭಾಷೆಗೆ ಅನುವಾದ ಮಾಡುವ ಸ್ಪರ್ಧೆಯಾಗಿದ್ದು ಒಟ್ಟು 45 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸಂಸ್ಕೃತ ಅಧ್ಯಾಪಕರಾದ ಶ್ರೀಮತಿ ಅನ್ನಪೂರ್ಣ ಎನ್ ಭಟ್ ಈ ಸ್ಪರ್ಧೆಯನ್ನು ನಡೆಸಿಕೊಟ್ಟರು.

**ವಿಜ್ಞಾನ ಪ್ರಯೋಗ 31.12.21**



5ನೇ ತರಗತಿಯ ವಸ್ತು ಸ್ವರೂಪ ಪಾಠದ ಬಗ್ಗೆ ಸಾಮೂಹಿಕ ವಿಜ್ಞಾನ ಪ್ರಯೋಗಗಳನ್ನು ಮಾಡಲಾಯಿತು. ಒಟ್ಟು 20 ಪ್ರಯೋಗಗಳನ್ನು ವಿದ್ಯಾರ್ಥಿಗಳು ತಾವೇ ಮಾಡಿ ವಿವರಿಸಿದರು. ವಿಜ್ಞಾನ ಅಧ್ಯಾಪಕರಾದ ಶ್ರೀ ಬಾಲಕೃಷ್ಣ ಹಾಗೂ ಶ್ರೀಮತಿ ರಾಜೇಶ್ವರಿ ನಿರ್ವಹಿಸಿದರು.

## ಪ್ರೌಢಶಾಲೆ

**ಮಾನಸಿಕ ಆರೋಗ್ಯದ ಮಾಹಿತಿ**



ಡಾ. ಕಮಲ ಪ್ರಭಾಕರ್ ಭಟ್ ವಿದ್ಯಾರ್ಥಿನಿಯರಿಗೆ ಮಾನಸಿಕ ಆರೋಗ್ಯದ ಬಗ್ಗೆ ಮಾಹಿತಿ ನೀಡಿದರು. ವೇದಿಕೆಯಲ್ಲಿ ಶಾರೀರಿಕ ಅಧ್ಯಾಪಕರಾದ ಶ್ರೀಮತಿ ಭಾಗ್ಯಶ್ರೀ ಹಾಗೂ ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.

**ರೆಡ್‌ಕ್ರಾಸ್ ಘಟಕ ಉದ್ಘಾಟನೆ 2.12.21**

ಗ್ರಾಮ ಪಂಚಾಯತ್ ಅಧ್ಯಕ್ಷೆ ಭಗಿನಿ ಹಿರಣ್ಮಯಿ ನೆರವೇರಿಸಿದರು. ವೇದಿಕೆಯಲ್ಲಿ ನಿವೃತ್ತ ಅಧ್ಯಾಪಕರಾದ ಶ್ರೀ ರಾಧಾಕೃಷ್ಣ ಅಡ್ಯಂತಾಯ, ನಿರ್ದೇಶಕ ಶ್ರೀ ಪ್ರಶಾಂತ್ ಎಸ್ ಶ್ರೀಮಾನ್ ಉಪಸ್ಥಿತರಿದ್ದರು ಶ್ರೀ ಗೋಪಾಲ್ ಶ್ರೀಮಾನ್ ಹಾಗೂ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಶಾಂಭವಿ ಮಾತಾಜಿ ಉಪಸ್ಥಿತರಿದ್ದರು

**ಜಂತುಹುಳ ನಿವಾರಣ ಮಾತ್ರೆಗಳ ವಿತರಣೆ 3.12.21**

ಸರಕಾರದಿಂದ ವಿತರಿಸಲಾದ ಜಂತುಹುಳ ನಿವಾರಣ ಮಾತ್ರೆಗಳನ್ನು ಮುಖ್ಯೋಪಾಧ್ಯಾಯರಾದ ಶ್ರೀಮತಿ ಶಾಂಭವಿ ವಿದ್ಯಾರ್ಥಿಗಳಿಗೆ ವಿತರಿಸಿದರು.

**ಸಾಮೂಹಿಕ ಹುಟ್ಟುಹಬ್ಬ, ಭಜನೆ 4.12.21**

ಮಧುಕರ ಸಭಾಂಗಣದಲ್ಲಿ ಏಪ್ರಿಲ್‌ನಿಂದ ನವೆಂಬರ್ ತಿಂಗಳವರೆಗೆ ಹುಟ್ಟಿದ ವಿದ್ಯಾರ್ಥಿಗಳ ಸಾಮೂಹಿಕ ಹುಟ್ಟು ಹಬ್ಬ ಮತ್ತು ಭಜನಾ ಕಾರ್ಯಕ್ರಮವನ್ನು ನಡೆಸಲಾಯಿತು. ಶ್ರೀಮತಿ ರಾಜೇಶ್ವರಿ ಮಾತಾಜಿ ಉಪಸ್ಥಿತರಿದ್ದು ಮಕ್ಕಳಿಗೆ ತಿಲಕಧಾರಣೆ ಮಾಡಿ ಹುಟ್ಟು ಹಬ್ಬದ ಆಚರಣೆಯ ಮಹತ್ವ ಮತ್ತು ಅದರ ಆಚರಣೆ ಹೇಗಿರಬೇಕೆಂಬುದರ ಬಗ್ಗೆ ತಿಳಿಸಿದರು.

**ವಿಜ್ಞಾನ ಪ್ರಯೋಗಾಲಯದ ಬೈಠಕ್ 4.12.21**

ನೂತನ ವಿಜ್ಞಾನ ಪ್ರಯೋಗಾಲಯದ ಯೋಜನಾ ಬೈಠಕ್ ವಿದ್ಯಾಕೇಂದ್ರದ ಸಂಚಾಲಕರಾದ ಶ್ರೀ ವಸಂತಮಾಧವ ಇವರ ಉಪಸ್ಥಿತಿಯಲ್ಲಿ ನಡೆಯಿತು. ಮುಖ್ಯೋಪಾಧ್ಯಾಯರು ಹಾಗೂ ವಿಜ್ಞಾನ ವಿಷಯದ ಅಧ್ಯಾಪಕರು ಉಪಸ್ಥಿತರಿದ್ದರು.

**ಅಂಚೆಕಾರ್ಡ್ ಪ್ರಬಂಧ ಸ್ಪರ್ಧೆ ಅಭಿಯಾನ 11.12.21**

ಆಜಾದಿ ಕಾ ಅಮೃತ ಮಹೋತ್ಸವ ಅಂಗವಾಗಿ ಅಂಚೆ ಇಲಾಖೆಯವರು ಹಾಗೂ ಪ್ರಸಾರ ಇಲಾಖೆಯವರು ಜಂಟಿಯಾಗಿ ಆಯೋಜಿಸಿದ ಅಂಚೆಕಾರ್ಡ್ ಅಭಿಯಾನದಲ್ಲಿ ಪ್ರೌಢಶಾಲೆಯ 285 ವಿದ್ಯಾರ್ಥಿಗಳು, '2047 ರಲ್ಲಿ ನನ್ನ ಭಾರತ 'ಹಾಗೂ 'ಸ್ಥಳೀಯ ಸ್ವಾತಂತ್ರ್ಯ ಹೋರಾಟಗಾರರ ಕಿರು ಪರಿಚಯ' ಈ ವಿಷಯಗಳಲ್ಲಿ ಪ್ರಬಂಧ ಬರೆಯುವ ಸ್ಪರ್ಧೆಯಲ್ಲಿ ಪಾಲ್ಗೊಂಡರು.

**ಯೋಗ ವ್ಯಾಯಾಮ 27.12.21**



ಪ್ರೌಢಶಾಲಾ ಎಲ್ಲಾ ವಿದ್ಯಾರ್ಥಿಗಳಿಗೆ ಶಾರೀರಿಕ ಶಿಕ್ಷಣ ಅಧ್ಯಾಪಕರಾದ ಶ್ರೀ ಪುರುಷೋತ್ತಮ ಇವರು ಯೋಗ ವ್ಯಾಯಾಮ ಮಾಡಿಸಿದರು.

**ಗಣಿತ ದಿನಾಚರಣೆ 22.12.21**

ಗಣಿತ ದಿನಾಚರಣೆಯ ನಿಮಿತ್ತ ಶ್ರೀಮತಿ ವಿನುತಾ ಮಾತಾಜಿ ಶ್ರೀನಿವಾಸ್ ರಾಮಾನುಜನ್ ಅವರ ಸಾಧನೆಯನ್ನು ವಿವರಿಸುವುದರ ಮೂಲಕ ವಿದ್ಯಾರ್ಥಿಗಳಿಗೆ ದಿನದ ಮಹತ್ವವನ್ನು ತಿಳಿಸಿದರು.

**ಅಮೃತ ಮಹೋತ್ಸವದ ಪ್ರಯುಕ್ತ ಕಥಾಕಥನ**

ಕಥಾ ಕಥನದಲ್ಲಿ 'ಪೃಥ್ವಿರಾಜ್ ಚೌಹಾಣ್' ಅವರ ಬಗ್ಗೆ ಶ್ರೀಮತಿ ವಿನುತ ಮಾತಾಜಿ 'ರಾಮ್‌ಪ್ರಸಾದ್ ಬಿಸ್ಮಿಲ್ಲಾ' ಕುರಿತು ಶ್ರೀಮತಿ ಸುಷ್ಮಾ ಮಾತಾಜಿ 'ದಾದಾಬಾಯಿ ನವರೋಜಿ'ಯವರ ಕುರಿತು ಶ್ರೀಮತಿ ಸೌಮ್ಯ ಪಿ. ಮಾತಾಜಿ ಹಾಗೂ 'ಜಲಿಯನ್ ವಾಲಾಬಾಗ್ ಹತ್ಯಾಕಾಂಡ'ದ ಬಗ್ಗೆ ಶ್ರೀ ಕೊಟ್ರೇಶ ಶ್ರೀಮಾನ್ ವಿದ್ಯಾರ್ಥಿಗಳಿಗೆ ತಿಳಿಸಿದರು.

## ಪದವಿಪೂರ್ವ

**ಕೃಷಿ ಚಟುವಟಿಕೆ 3.12.21**



ಸುಧೆಕ್ಕಾರಿನಲ್ಲಿ ನಡೆದ ಕೃಷಿ ಚಟುವಟಿಕೆಯಲ್ಲಿ ಪದವಿ ಪೂರ್ವ ವಾಣಿಜ್ಯ ವಿಭಾಗದ ಬಸವೇಶ್ವರ ತರಗತಿಯ 46 ವಿದ್ಯಾರ್ಥಿಗಳು ಪಾಲ್ಗೊಂಡರು.

**ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಕಾರ್ಯಾಗಾರ:**



17.12.21ರಂದು ಪದವಿ ಪೂರ್ವ ವಿಭಾಗದ ಅಟಲ್ ಟಿಂಕರಿಂಗ್ ಲ್ಯಾಬ್‌ನಲ್ಲಿ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ವಿಶೇಷ ಕಾರ್ಯಾಗಾರ ನಡೆಸಲಾಯಿತು.

**ಬ್ಯಾಂಕ್ ಭೇಟಿ: 22.11.21**



ದ್ವಿ.ಪಿಯುಸಿ ವಾಣಿಜ್ಯ ದಧೀಚಿ ತರಗತಿಯ ವಿದ್ಯಾರ್ಥಿಗಳು ಶ್ರೀರಾಮ ಸೌ.ಸ.ಸಂಸ್ಥೆಯ ಎರಡು ಕಚೇರಿಗಳಿಗೆ, ಶ್ರೀಗುರುದೇವ ವಿವಿದೋದ್ದೇಶ ಸಹಕಾರ ಸಂಘ ನಿ. ಕಲ್ಲಡ್ಕ ಶಾಖೆಗೆ ಭೇಟಿ ನೀಡಿ ಬ್ಯಾಂಕಿಂಗ್ ವ್ಯವಹಾರಗಳ ಬಗ್ಗೆ ಮಾಹಿತಿ ಪಡೆದುಕೊಂಡರು.

**ಆಕಾಶವಾಣಿ ಕಾರ್ಯಕ್ರಮ 08.12.21**

ಇತಿಹಾಸದ ಉಪನ್ಯಾಸಕರಾದ ಶ್ರೀ ತಿರುಮಲೇಶ್ವರ ಪ್ರಶಾಂತ್ ಶ್ರೀಮಾನ್ ಅವರಿಂದ ಮಂಗಳೂರು ಆಕಾಶವಾಣಿಯಲ್ಲಿ ಆಜಾದಿ ಕಾ ಅಮೃತ ಮಹೋತ್ಸವ ನಿಮಿತ್ತ 'ಸ್ವಾತಂತ್ರ್ಯ ಪಥ' ಕಾರ್ಯಕ್ರಮದ ಧ್ವನಿಮುದ್ರಣ ನಡೆಯಿತು.

**ಆಯುರ್ವೇದಿಕ್ ಮೆಡಿಕಲ್ ಕಾಲೇಜು ಭೇಟಿ**



ದ್ವಿತೀಯ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಶಾರದಾ ಆಯುರ್ವೇದಿಕ್ ಮೆಡಿಕಲ್ ಕಾಲೇಜು ಮತ್ತು ಶಾರದಾ ಆಯುರ್ವೇದಿಕ್ ಆಸ್ಪತ್ರೆ ದೇವಿ ನಗರ ತಲಪಾಡಿ ಇಲ್ಲಿಗೆ ಭೇಟಿ ನೀಡಿದರು.

**ಕರಾವಳಿ ಕಲಾನ್ವೇಷಣೆ 25.12.21**

ಲಯನ್ಸ್ ಕ್ಲಬ್ ಬಿ.ಸಿ.ರೋಡ್ ಇಲ್ಲಿ ನಡೆದ ರಾರಾಸಂ ಕಾರ್ಯಕ್ರಮದಲ್ಲಿ ದ್ವಿತೀಯ ವಾಣಿಜ್ಯ ದಧೀಚಿ ವಿಭಾಗ ಆದಿತ್ಯ ಮೈಥಿಲಿ ಕರಾವಳಿ ಕಲಾನ್ವೇಷಣೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಹಾಗೂ ದ್ವಿತೀಯ ವಾಣಿಜ್ಯ ಬಸವೇಶ್ವರ ವಿಭಾಗ ಸೌಜನ್ಯ ಏಕಪಾತ್ರಾಭಿನಯ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದಿರುತ್ತಾರೆ.

**ಭಜನೆ ಮತ್ತು ಸಾಮೂಹಿಕ ಹುಟ್ಟುಹಬ್ಬ ಆಚರಣೆ:**

27.12.21ರಂದು ಪದವಿಪೂರ್ವ ವಿಭಾಗದಲ್ಲಿ ಭಜನೆ ಹಾಗೂ ಡಿಸೆಂಬರ್ ತಿಂಗಳಿನಲ್ಲಿ ಹುಟ್ಟಿದ ವಿದ್ಯಾರ್ಥಿಗಳ ಹುಟುಹಬ್ಬ ಹಾಗೂ ಭಜನಾ ಕಾರ್ಯಕ್ರಮ ಆಚರಿಸಲಾಯಿತು.

**ರಾಜ್ಯಮಟ್ಟದ ವಿಜ್ಞಾನ ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ:**



ನವೆಂಬರ್ 2021ರಂದು ಕನ್ನಡ ಸಾಂಸ್ಕೃತಿಕ ಸಂಘ(ರಿ) ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಮಂಡಳಿ, ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಶಾಲೆಗಳು ಬೆಂಗಳೂರು ಇವರು ಕನ್ನಡ ವಿಜ್ಞಾನ ಪತ್ರಿಕೆ ಕಣಾದ 47ನೇ ಸಂಚಿಕೆಗಾಗಿ ನಡೆಸಿದ ಕನ್ನಡ ವಿಜ್ಞಾನ ಪ್ರಬಂಧ ಸ್ಪರ್ಧೆಯಲ್ಲಿ ಶ್ರೀರಾಮ ಪದವಿಪೂರ್ವ ವಿಜ್ಞಾನ ವಿಭಾಗದ ವಿದ್ಯಾರ್ಥಿನಿ ಕುಮಾರಿ ಅರ್ಪಿತ ಅವರು ಬರೆದ ಕೋವಿಡ್ 19 ಸೋಂಕು ಪತ್ತೆ ಹಚ್ಚಲು ಬಳಸುವ ತಂತ್ರಜ್ಞಾನಗಳು ಮತ್ತು ಉಪಯುಕ್ತತೆ ಎಂಬ ಲೇಖನದಲ್ಲಿ ಪ್ರಥಮ ಬಹುಮಾನ ಗಳಿಸಿರುತ್ತಾರೆ.

**ಕಲಾ ವಿಭಾಗ ಶೇ. 100% ಫಲಿತಾಂಶ**

2020–21ನೇ ಶೈಕ್ಷಣಿಕ ಸಾಲಿನ ಅಂತಿಮ ಕಲಾ ವಿಭಾಗದ ಫಲಿತಾಂಶ ಬಂದಿದ್ದು ಸೆಮಿಸ್ಟರ್ ಪರೀಕ್ಷೆ ಬರೆದ ಎಲ್ಲಾ ವಿದ್ಯಾರ್ಥಿಗಳು, 5ನೇ ಮತ್ತು 6ನೇ ಎರಡೂ ಸೆಮಿಸ್ಟರಗಳಲ್ಲಿ ಶೇ. 100 ಫಲಿತಾಂಶ ಪಡೆದಿರುತ್ತಾರೆ. 7 ಮಂದಿ ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಪಡೆದಿದ್ದಾರೆ.

**ರಂಗೋಲಿ ಸ್ಪರ್ಧೆ 03.12.21**

ಪ್ರಭೋಧ ವಾಣಿಜ್ಯ ಸಂಘವು "ಕಂಪೆನಿ ಲೋಗೊ ಮತ್ತು ಬ್ರಾಂಡ್ ನೇಮ್"ಎಂಬ ವಿಷಯದಲ್ಲಿ ರಂಗೋಲಿ ಸ್ಪರ್ಧೆಯನ್ನು ಆಯೋಜಿಸಿತು. 35 ತಂಡಗಳು ಭಾಗವಹಿಸಿದ್ದು, ಸ್ಪರ್ಧೆಯ ತೀರ್ಪುಗಾರರಾಗಿ ಪ.ಪೂ ವಾಣಿಜ್ಯ ವಿಭಾಗದ ಶ್ರೀ ಲಕ್ಷ್ಮೀಶ ಮಯ್ಯ ಶ್ರೀಮಾನ್, ಶ್ರೀ ದಿನೇಶ್ ಶ್ರೀಮಾನ್ ಹಾಗೂ ಪದವಿಯ ವಾಣಿಜ್ಯ ಉಪನ್ಯಾಸಕಿ ಶ್ರೀಮತಿ ಸುಕನ್ಯಾ ಮಾತಾಜಿ ಸಹಕರಿಸಿದರು.

**ಭವಿಷ್ ಘಟಕದ ಮಾಸಿಕ ಸಭೆ 03.12.2021**

2021–22ನೇ ಭವಿಷ್ ಘಟಕದ ಮಾಸಿಕ ಸಭೆಯು ಗಣಪತಿ ಹಗ್ಡೆ ಅವರ ಉಪಸ್ಥಿತಿಯಲ್ಲಿ ನಡೆಯಿತು. ಸಭೆಯಲ್ಲಿ ವಿದ್ಯಾರ್ಥಿಗಳ ಮಾಹಿತಿ ಮತ್ತು ಕೌಶಲ್ಯ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸುವುದು ಮತ್ತು ವಾರ್ಷಿಕ ಶಿಬಿರ ನಡೆಸುವ ಬಗ್ಗೆ ಚರ್ಚಿಸಲಾಯಿತು. ಈ ಸಭೆಯಲ್ಲಿ 4 ಮಂದಿ ಉಪನ್ಯಾಸಕರು, ಪ್ರಸ್ತುತ ವಿವೇಕಾನಂದ ಬಿ.ಎಡ್ ಕಾಲೇಜಿನಲ್ಲಿ ಅಧ್ಯಯನ ನಡೆಸುತ್ತಿರುವ ಇಬ್ಬರು ಹಿರಿಯ ವಿದ್ಯಾರ್ಥಿಗಳು ಮತ್ತು ಕಾಲೇಜಿನ ಪ್ರಾಂಶುಪಾಲರು ಉಪಸ್ಥಿತರಿದ್ದರು.

**ಕೌಶಲ್ಯ ಅಭಿವೃದ್ಧಿ ತರಬೇತಿ 03.12.2021**

ವಾಣಿಜ್ಯ ವಿಭಾಗ, ವಿಜ್ಞಾನ ವಿಭಾಗ ಮತ್ತು ಕರಿಯರ್ ಗೈಡೆನ್ಸ್ ಸೆಲ್ ಇದರ ಸಹಯೋಗದೊಂದಿಗೆ ಪ್ರಥಮ ಪದವಿ ವಿದ್ಯಾರ್ಥಿಗಳಿಗೆ ಕೌಶಲ್ಯ ಅಭಿವೃದ್ಧಿ ತರಬೇತಿಯ ಮೊದಲ ತರಗತಿಯನ್ನು ಭೌತಶಾಸ್ತ್ರ ಉಪನ್ಯಾಸಕರಾದ ಶ್ರೀ ಸುಬ್ರಹ್ಮಣ್ಯ ಇವರು ನಡೆಸಿಕೊಟ್ಟರು.

**ಉಪನ್ಯಾಸ ಕಾರ್ಯಕ್ರಮ 03.12.2021**

ವಿವೇಕಾನಂದ ಎಂಜಿನಿಯರಿಂಗ್ ಕಾಲೇಜಿನ ಎಂಸಿಜೆ ವಿಭಾಗದ ಮುಖ್ಯಸ್ಥೆ ಡಾ ವಂದನಾ ಇವರು "Artificial Intelligence" ಇದರ ಪ್ರಾಮುಖ್ಯತೆ ಮತ್ತು ಆಧುನಿಕ ಯುಗದಲ್ಲಿ ಇದರ ಬಳಕೆ ಮತ್ತು ಮುಂಬರುವ ದಿನಗಳಲ್ಲಿ ಇದರ ಅನಿವಾರ್ಯದ ಕುರಿತು ಬಿ.ಸಿ.ಎ ಹಾಗೂ ಪ್ರಥಮ ವರ್ಷದ ಬಿಕಾಂ ವಿದ್ಯಾರ್ಥಿಗಳಿಗೆ ಉಪನ್ಯಾಸವನ್ನು ನೀಡಿದರು. ಈ ಕಾರ್ಯಕ್ರಮದಲ್ಲಿ ಬಿಸಿಎ ವಿಭಾಗದ ಮುಖ್ಯಸ್ಥೆ ಶ್ರೀಮತಿ ಧನ್ಯಶ್ರೀ ಮಾತಾಜಿ ಸ್ವಾಗತಿಸಿ ವಂದಿಸಿದರು ಹಾಗೂ ಶ್ರೀಮತಿ ಸ್ವಸ್ತಿಕ ಮಾತಾಜಿ ಉಪಸ್ಥಿತರಿದ್ದರು.

**ಮಾತುಗಾರಿಕೆಯ ಕಲೆ 09.12.2021**

ಭವಿಷ್ ಘಟಕ ವತಿಯಿಂದ ವಿದ್ಯಾರ್ಥಿಗಳಿಗೆ ಮಾತುಗಾರಿಕೆಯ ಕಲೆ ಮತ್ತು ಓದುವಿಕೆಯ ಶೈಲಿಯ ಬಗ್ಗೆ ಕಾರ್ಯಕ್ರಮವನ್ನು ನಡೆಸಿಕೊಡಲಾಯಿತು.

**04.12.2021–** ರಾಷ್ಟ್ರೀಯ ಸೇವಾ ಯೋಜನೆ ವತಿಯಿಂದ ಘಟಕದಿಂದ ಚರಂಡಿ ಸ್ವಚ್ಛತೆ ಹಾಗೂ ವಸುಧಾರಾ ಗೋವಿನ ಮೇವನ್ನು ಉಪ್ಪರಿಗೆ ಮೇಲೆ ಹಾಕುವ ಕೆಲಸ ಮಾಡಿದರು.

**ಕಬಡ್ಡಿ ಆಟಗಾರರಿಗೆ ಅಭಿನಂದನೆ 09.12.2021**

ಸೇಕ್ರೇಡ್ ಹಾರ್ಟ್ ಫಸ್ಟ್ ಗ್ರೇಡ್ ಕಾಲೇಜು ಮಡಂತ್ಯಾರ್‌ನಲ್ಲಿ ನಡೆದ ಕಬಡ್ಡಿ ಪಂದ್ಯಾಟದಲ್ಲಿ ಭಾಗವಹಿಸಿದ್ದ ಆಟಗಾರರಿಗೆ ಪ್ರಾಂಶುಪಾಲರು, ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ವಿಘ್ನೇಶ್ ಶ್ರೀಮಾನ್ ಹಾಗೂ ವಾಣಿಜ್ಯ ವಿಭಾಗದ ಉಪನ್ಯಾಸಕಿ ಶ್ರೀಮತಿ ಸುಕನ್ಯಾ ಮಾತಾಜಿಯ ಉಪಸ್ಥಿತಿಯಲ್ಲಿ ಅಭಿನಂದನೆ ಪತ್ರ ಕೊಟ್ಟು ಗೌರವಿಸಲಾಯಿತು.

**ವಿವೇಕವಾಣಿ ಸರಣಿ ಉಪನ್ಯಾಸ 12.12.2021**

ಸ್ವಾಮಿ ವಿವೇಕಾನಂದ ಸ್ಟಡಿ ಸೆಂಟರ್– ಮಂಗಳೂರು ಯೂನಿವರ್ಸಿಟಿ ಆಯೋಜಿಸಿದ ವಿವೇಕವಾಣಿ 11ರಲ್ಲಿ ಪದ್ಮಶ್ರೀ ಪ್ರಶಸ್ತಿ ವಿಜೇತೆ ಕುಮಾರಿ ನಿವೇದಿತ ಭಿಡೆ, ಉಪಾಧ್ಯಕ್ಷರು ವಿವೇಕಾನಂದ ಕೇಂದ್ರ ಕನ್ಯಾಕುಮಾರಿ ಇವರು "ರಾಷ್ಟ್ರ ನಿರ್ಮಾಣದಲ್ಲಿ ಸೇವೆಯ ಪಾತ್ರ ವಿವೇಕಾನಂದರ ಪರಿಕಲ್ಪನೆಯಲ್ಲಿ" ಎಂಬ ಉಪನ್ಯಾಸವನ್ನು ನೀಡಿದರು. ಈ ಕಾರ್ಯಕ್ರಮದಲ್ಲಿ ನಮ್ಮ ಕಾಲೇಜಿನ 65 ವಿದ್ಯಾರ್ಥಿಗಳು ಭಾಗವಹಿಸಿದ್ದರು.

**ಗ್ರಾಮೀಣ ಕ್ರೀಡೆಗಳಲ್ಲಿ ಸಾಧನೆ 12.12.2021**

ರಾಮಕೃಷ್ಣ ತಪೋವನ ಪೊಳಲಿಯಲ್ಲಿ ನಡೆದ ಮಹಿಳೆಯರ ಥ್ರೋಬಾಲ್, ಕಬ್ಬಡ್ಡಿ ಮುಂತಾದ ಗ್ರಾಮೀಣ ಕ್ರೀಡೆಗಳಲ್ಲಿ ಥ್ರೋಬಾಲ್ ತಂಡವು ತೃತೀಯ ಸ್ಥಾನವನ್ನು ಗಳಿಸಿರುತ್ತದೆ ಹಾಗೆಯೇ ಲೆಮನ್ ಸ್ಪೂನ್ ರೇಸಲ್ಲಿ 2ನೇ ಬಿ.ಕಾಮ್‌ನ ಗೌತಮಿ ಪ್ರಥಮ, ಸ್ಕಿಪ್ಪಿಂಗ್‌ನಲ್ಲಿ 2ನೇ ಬಿ.ಕಾಮ್‌ನ ಕೀರ್ತಿ ಪ್ರಥಮ ಸ್ಥಾನವನ್ನು ಪಡೆದಿರುತ್ತಾರೆ. 15ವಿದ್ಯಾರ್ಥಿಗಳು ಭಾಗವಹಿಸಿರುತ್ತಾರೆ.

**ಭಾರತ ಭೂಷಣ ರಾಷ್ಟ್ರ ಪ್ರಶಸ್ತಿ 13.12.2021**

ಕರ್ನಾಟಕ ರಾಜ್ಯದ ಪ್ರತಿಷ್ಠಿತ ಭಾರತೀಯ ಕಲಾ ಸಂಸ್ಕೃತಿ ಅಕಾಡಮಿ (ರಿ) ದಾವಣಗೆರೆ ವತಿಯಿಂದ ರಾಷ್ಟ್ರ ಮಟ್ಟದ ಭಾರತ ಭೂಷಣ ರಾಷ್ಟ್ರ ಪ್ರಶಸ್ತಿಯನ್ನು ಅರ್ಥಶಾಸ್ತ್ರ ಉಪನ್ಯಾಸಕಿ ಕು.ಸಂಧ್ಯಾ ಕುಮಾರಿ ಎಸ್ ವಿಟ್ಲ ಇವರ ಸಾಹಿತ್ಯ ಕ್ಷೇತ್ರದ ಸಾಧನೆ ಗುರುತಿಸಿ ಪ್ರಶಸ್ತಿಯನ್ನು ನೀಡಿದೆ.

**ಅಂಬೇಡ್ಕರ್ ಓದು– ಸ್ಪರ್ಧಾ ವಿಜೇತರಿಗೆ ಪ್ರಶಸ್ತಿ**



ಕನ್ನಡ–ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಕಾಲೇಜಿನ ಕನ್ನಡ ಮತ್ತು ಸಾಹಿತ್ಯ ಸಂಘದ ವತಿಯಿಂದ ಅಂಬೇಡ್ಕರ್ ಓದು ಎಂಬ ಪರಿಕಲ್ಪನೆಯಡಿಯಲ್ಲಿ ನಡೆದ ಪ್ರಬಂಧ ಸ್ಪರ್ಧೆಯ ವಿಜೇತರಿಗೆ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯ ಸ್ವಯಂಸೇವಕ ಹಾಗೂ ಬಂಟ್ವಾಳದ ಔಷಧಿ ತಜ್ಞರಾದ ಶ್ರೀ ಸುರೇಶ್ ಪರ್ಕಳ ಮುಖ್ಯ ಅತಿಥಿಯಾಗಿ ಆಗಮಿಸಿ ಬಹುಮಾನ ವಿತರಿಸಿ ಅಂಬೇಡ್ಕರ್‌ರ ಜೀವನ ಸಾಧನೆ ವಿವರಿಸಿದರು. ವೇದಿಕೆಯಲ್ಲಿ ಹಿರಿಯ ವಿದ್ಯಾರ್ಥಿ ಸಂಘದ ಪದಾಧಿಕಾರಿ ಶ್ರೀಮತಿ ಪವಿತ್ರ ಉಪಸ್ಥಿತರಿದ್ದರು. ಕನ್ನಡ ವಿಭಾಗ ಮುಖ್ಯಸ್ಥ ಶ್ರೀ ಯತಿರಾಜ್ ಪೆರಾಜೆ ಸ್ವಾಗತಿಸಿ, ಸಾಹಿತ್ಯ ಸಂಘದ ಸಂಯೋಜಕಿ ಸಂಧ್ಯಾಕುಮಾರಿ ಎಸ್ ವಿಟ್ಲ ವಂದಿಸಿ, ಅಧ್ಯಕ್ಷೆ ವಿದ್ಯಾರ್ಥಿನಿ ಸುಶ್ಮಿತಾ ನಿರೂಪಿಸಿದರು.

**ಮಿಯಾವಾಕಿ ಫಾರೆಸ್ಟ್ ಸ್ವಚ್ಛತೆ 18.12.2021**



ಪ್ರಕೃತಿ ಪರಿಸರ ಸಂಘದಿಂದ ಕಾಲೇಜಿನ ಆವರಣದಲ್ಲಿರುವ ಮಿಯಾವಾಕಿ ಫಾರೆಸ್ಟ್‌ನ ಸ್ವಚ್ಛತಾ ಕಾರ್ಯಕ್ರಮ ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳಿಂದ ನಡೆಯಿತು.

**ರಾಷ್ಟ್ರೀಯ ಗಣಿತಶಾಸ್ತ್ರ ದಿನಾಚರಣೆ 22.12.2021**



ಪ್ರಭವ ವಿಜ್ಞಾನ ಸಂಘ ಹಾಗೂ ಗಣಿತ ಶಾಸ್ತ್ರ ವಿಭಾಗದ ಜಂಟಿ ಆಶ್ರಯದಲ್ಲಿ "ರಾಷ್ಟ್ರೀಯ ಗಣಿತ ಶಾಸ್ತ್ರ ದಿನ"ವನ್ನು ಆಚರಿಸಲಾಯಿತು. ಶ್ರೀ ರಂಜಿತ್ ಶ್ರೀಮನ್, ಶ್ರೀಮತಿ ವಿದ್ಯಾಶ್ರೀ ಮಾತಾಜಿ ಉಪಸ್ಥಿತರಿದ್ದರು. ಭೌತಶಾಸ್ತ್ರ ವಿಭಾಗದ ಉಪನ್ಯಾಸಕರಾದ ಶ್ರೀ ಸುಬ್ರಹ್ಮಣ್ಯ ಶ್ರೀನಿವಾಸ್ ರಾಮಾನುಜಮ್‌ರವರ ಜೀವನ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಉಲ್ಲೇಖಿಸಿದ್ದು, ವಿದ್ಯಾರ್ಥಿನಿ ಕುಮಾರಿ ಸವಿತಾ ದೃಶ್ಯ ಮಾಧ್ಯಮದ ಮೂಲಕ ಅವರ ಸಾಧನೆಯ ಬಗ್ಗೆ ತಿಳಿಸಿದರು. ನಂತರ ಗಣಿತಶಾಸ್ತ್ರ ರಸಪ್ರಶ್ನೆ ಸ್ಪರ್ಧೆ ನಡೆಯಿತು.

**ದೀಪ ಹಸ್ತಾಂತರ 24.12.2021**

ದಿನಾಂಕ 18.12.2021 ರಂದು ಮೈಸೂರಿನಲ್ಲಿ, ಕರುನಾಡು ಸೇವಾ ಟ್ರಸ್ಟ್ ಮಂಡ್ಯ ಇದರ ವತಿಯಿಂದ ನಡೆದ ಕವಿಗೋಷ್ಠಿಯಲ್ಲಿ ಸಾಧಕರಿಗೆ ಕರುನಾಡ ರಾಜ್ಯೋತ್ಸವ ಪ್ರಶಸ್ತಿ ವಿಜೇತರಾದ ಅರ್ಥಶಾಸ್ತ್ರ ಉನ್ಯಾಸಕಿ ಸಂಧ್ಯಾಕುಮಾರಿ ಇವರು ತಮಗೆ ದೊರಕಿದ ಸ್ಮರಣಿಕೆ(ದೀಪ)ಯನ್ನು ಕಾಲೇಜಿಗೆ ಸಮರ್ಪಿಸಿದರು.

**ವಾಲಿಬಾಲ್ ಸ್ಪರ್ಧೆ 26.2.2021**

ಕೊಡಾಜೆ ನೇರಳಕಟ್ಟೆ ಕ್ಲಬ್ ಆಯೋಜಿಸಿದ ವಾಲಿಬಾಲ್ ಸ್ಪರ್ಧೆಯಲ್ಲಿ ನಮ್ಮ ಕಾಲೇಜಿನ ಎರಡು ತಂಡ ಭಾಗವಹಿಸಿದ್ದು, ಸೆಮಿಫೈನಲ್ ಹಂತ ತಲುಪಿದರು.



**ಭಜನಾ ಸೇವೆಯಲ್ಲಿ ಭಾಗಿ 25.12.21**

ಕರಿಮಜಲು ಶ್ರೀಕೃಷ್ಣ ಭಜನಾ ಮಂದಿರದ ಭಜನಾ ಸೇವೆಯಲ್ಲಿ ವಿದ್ಯಾಕೇಂದ್ರದ 20 ವಿದ್ಯಾರ್ಥಿಗಳು, ಹಾಗೂ ಮಾತಾಜಿಗಳಾದ ಶ್ರೀಮತಿ ಗಾಯತ್ರಿ, ಶ್ರೀಮತಿ ಸ್ವರ್ಣಗೌರಿ, ಶ್ರೀಮತಿ ಶ್ರೀದೇವಿ ಭಾಗವಹಿಸಿದ್ದರು.



**ವಸುಧಾರಾ ಗೋಶಾಲೆಗೆ ಮೇವು 3.12.21**

ವಿದ್ಯಾಕೇಂದ್ರದದಲ್ಲಿರುವ ಗೋವುಗಳಿಗೆ ಮೇವು ಸಂಗ್ರಹಿಸುವ ನಿಟ್ಟಿನಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳು ಸುಧೆಕಾರ್‌ನಲ್ಲಿ ಭತ್ತ ಬೆಳೆದ ಹೊಲದಿಂದ ಹುಲ್ಲನ್ನು ಸಂಗ್ರಹಿಸಿ ಗೋಶಾಲೆಗೆ ನೀಡಿದರು.




**ರೆಡ್‌ಕ್ರಾಸ್ ಘಟಕ ಉದ್ಘಾಟನೆ**

ಪ್ರೌಢಶಾಲಾ ವಿಭಾಗದ ರೆಡ್ ಕ್ರಾಸ್ ಘಟಕದ ಉದ್ಘಾಟನೆಯನ್ನು ಬಾಳ್ತಿಲ ಗ್ರಾಮ ಪಂಚಾಯತ್ ಅಧ್ಯಕ್ಷೆ ಭ. ಹಿರಣ್ಮಯಿ ಉದ್ಘಾಟಿಸಿದರು. ಮುಖ್ಯೋಪಾಧ್ಯಾಯರು, ಶಿಕ್ಷಕರು ಉಪಸ್ಥಿತರಿದ್ದರು.



**ವಿದ್ಯಾರ್ಥಿಗಳಿಗೆ ಟಿಟಿ ಇಂಜೆಕ್ಷನ್ 09.12.21**

ಬಾಳ್ತಿಲ ಪ್ರಾಥಮಿಕ ಆರೋಗ್ಯ ಕೇಂದ್ರದವರು ಪ್ರೌಢಶಾಲೆಯ ಎಲ್ಲಾ ವಿದ್ಯಾರ್ಥಿಗಳಿಗೆ ಆರೋಗ್ಯ ತಪಾಸಣೆ ಮಾಡಿ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಟಿ.ಟಿ ಇಂಜೆಕ್ಷನ್ ನೀಡಿದರು.



**ಪ್ರಯೋಗಾಲಯ ವೀಕ್ಷಣೆ 2.12.21**

ಪ್ರೌಢಶಾಲೆಯ ಎಲ್ಲಾ ವಿಜ್ಞಾನ ಅಧ್ಯಾಪಕರು ಹಾಗೂ ಮುಖ್ಯೋಪಾಧ್ಯಾಯರು ಪುತ್ತೂರಿನ ವಿವೇಕಾನಂದ ಸಿಬಿಎಸ್ಸಿ ಶಾಲೆಯ ವಿಜ್ಞಾನ ಪ್ರಯೋಗಾಲಯವನ್ನು ವೀಕ್ಷಣೆ ಮಾಡಿದರು.



**ಭಗವದ್ಗೀತಾ ಕಂಠಪಾಠ – ಪ್ರಥಮ 20.12.21**

ಮಂಗಳೂರು ಸಂಸ್ಕೃತ ಸಂಘ ಇವರು ಗೀತಾ ಜಯಂತಿ ಪ್ರಯುಕ್ತ ನಡೆಸಿದ ಭಗವದ್ಗೀತಾ ಕಂಠಪಾಠ ಸ್ಪರ್ಧೆಯಲ್ಲಿ 8ನೇ ತರಗತಿ ವಾಸವಿ ಪ್ರಥಮ ಸ್ಥಾನ ಪಡೆದಿದ್ದು ಹಂಸ, ಶ್ರದ್ಧಾ ಭಾಗವಹಿಸಿರುತ್ತಾರೆ.

## ಪದವಿಪೂರ್ವ



**ಪೊಲೀಸ್ ಠಾಣೆಗೆ ಭೇಟಿ: 21.12.21**

ದ್ವಿತೀಯ ಕಲಾ ವಿಭಾಗದ ವಿದ್ಯಾರ್ಥಿಗಳು ಬಂಟ್ವಾಳ ನಗರ ಪೊಲೀಸ್ ಠಾಣೆಗೆ ಭೇಟಿ ನೀಡಿದರು. ಠಾಣಾಧಿಕಾರಿಗಳಾದ ಶ್ರೀ ಜಿನ್ನಪ್ಪ ಗೌಡ ಮತ್ತು ಸಿಬ್ಬಂದಿಗಳು ಠಾಣಾ ಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ಹಂಚಿಕೊಂಡರು. ಕಾಲೇಜಿನ ವತಿಯಿಂದ ಠಾಣೆಗೆ ಸ್ಮರಣಿಕೆಯನ್ನು ನೀಡಲಾಯಿತು.




**ಸಿವಿಲ್ ನ್ಯಾಯಾಲಯಕ್ಕೆ ಭೇಟಿ 22.11.21**

ದ್ವಿತೀಯ ಕಲಾ ವಿಭಾಗದ ವಿದ್ಯಾರ್ಥಿಗಳು ಬಂಟ್ವಾಳದ ಸಿವಿಲ್ ನ್ಯಾಯಾಲಯಕ್ಕೆ ಭೇಟಿ ನೀಡಿದರು. ನ್ಯಾಯವಾದಿಗಳು, ಶ್ರೀರಾಮ ವಿದ್ಯಾಕೇಂದ್ರದ ಆಡಳಿತ ಮಂಡಳಿ ಸದಸ್ಯರಾದ ಶ್ರೀ ಸತೀಶ್ ಭಟ್ ಶಿವಗಿರಿ ವಿದ್ಯಾರ್ಥಿಗಳಿಗೆ ನ್ಯಾಯಾಲಯದ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು.



**ವಿವೇಕಾನಂದ ಇಂಜಿನಿಯರಿಂಗ್ ಕಾಲೇಜು ಭೇಟಿ. 22.12.21**

ಉದ್ಯೋಗ ಮಾಹಿತಿಯ ಮುಖ್ಯಸ್ಥರಾದ ಪ್ರೊ. ವಂದನಾ ಶಂಕರ್, ಶ್ರೀಮತಿ ನಿರುಪಮಾ ಕೆ. ಮತ್ತು ಐದನೆ ಸೆಮಿಸ್ಟರ್ ವಿದ್ಯಾರ್ಥಿಗಳು ಇಂಜಿನಿಯರ್ ಪದವಿಯ ಪ್ರಾಮುಖ್ಯತೆ ಮತ್ತು ಮುಂದಿನ ಅವಕಾಶಗಳ ಬಗ್ಗೆ ಮಾಹಿತಿ ನೀಡಿದರು.



**ಶಿಕ್ಷಕ ರಕ್ಷಕ ಸಂಘದ ರಚನೆ 30.12.21**

ಪ.ಪೂರ್ವ ಕಾಲೇಜಿನಲ್ಲಿ ಶಿಕ್ಷಕ ರಕ್ಷಕ ಸಂಘದ ರಚನೆಯನ್ನು ಮಾಡಲಾಯಿತು. ಅಧ್ಯಕ್ಷರಾಗಿ ಶ್ರೀ ಶ್ಯಾಮ ಸುಬ್ರಹ್ಮಣ್ಯ.ಪಿ, ಉಪಾಧ್ಯಕ್ಷರಾಗಿ ಶ್ರೀ ನಾಗೇಶ್ ಮತ್ತು ಶ್ರೀಮತಿ ಶರ್ಮಿಳಾ ಶೆಟ್ಟಿ, 15ಮಂದಿ ಪದಾಧಿಕಾರಿಗಳು ಹಾಗೂ ಶಿಕ್ಷಕ ಪ್ರತಿನಿಧಿಯಾಗಿ ಶ್ರೀ ಗೋವಿಂದ ನಾರಾಯಣ ಅವರು ಆಯ್ಕೆಯಾದರು.





**ಸಾಂಸ್ಕೃತಿಕ ಕಾರ್ಯಕ್ರಮ 31.12.21:**



ಆಜಾದ್ ಕಾ ಅಮೃತ ಮಹೋತ್ಸವದ ಪ್ರಯುಕ್ತ ವಿದ್ಯಾರ್ಥಿಗಳಿಂದ ನಡೆದ ಪ್ರತಿಭಾ ಪ್ರದರ್ಶನವನ್ನು ಪ್ರೌಢಶಾಲೆಯ ಮುಖ್ಯ ಶಿಕ್ಷಕಿ ಶ್ರೀಮತಿ ಶಾಂಭವಿ ಅವರು ಉದ್ಘಾಟಿಸಿದರು. ಪ್ರಾಂಶುಪಾಲರಾದ ಶ್ರೀ ವಸಂತ ಬಲ್ಲಾಳ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಗಣಕಶಾಸ್ತ್ರ ಉಪನ್ಯಾಸಕಿ ಶ್ರೀಮತಿ ಚೈತನ್ಯ ಅವರು ನಿರ್ವಹಿಸಿದರು.





**ಗಣಕವಿಜ್ಞಾನ ಪ್ರಯೋಗಾಲಯ – ಐಟಿ ಕ್ಲಬ್ ಉದ್ಘಾಟನೆ ಮತ್ತು ವಿಶೇಷ ಉಪನ್ಯಾಸ 03.12.21**

ಡಾ| ಪ್ರಭಾಕರ ಭಟ್ ಕಲ್ಲಡ್ಕ ಮತ್ತು ಶ್ರೀ ವಸಂತ ಮಾಧವ ಇವರ ಉಪಸ್ಥಿತಿಯಲ್ಲಿ ಪುತ್ತೂರು ಸೈ.ಫಿಲೋಮಿನಾ ಕಾಲೇಜಿನ ಗಣಕವಿಜ್ಞಾನ ವಿಭಾಗ ಮುಖ್ಯಸ್ಥ ಶ್ರೀ ಗೋವಿಂದ ಪ್ರಕಾಶ್, ಪ್ರಗತಿಪರ ಕೃಷಿಕ ಸಿ.ವಿ ಗೋಪಾಲಕೃಷ್ಣ ಭಟ್, ವಿವೇಕಾನಂದ ಇಂ. ಕಾಲೇಜಿನ ಎಮ್.ಸಿ.ಎ ವಿಭಾಗದ ಮುಖ್ಯಸ್ಥೆ ಡಾ| ವಂದನಾ ಪ್ರಯೋಗಾಲಯ ಉದ್ಘಾಟಿಸಿದರು.



ಗೀತಾ ಜಯಂತಿ ಆಚರಣೆ 14.12.2021

ಸಂಸ್ಕೃತ ಸಂಘದಿಂದ ನಡೆದ ಗೀತಾ ಜಯಂತಿ ಕಾರ್ಯಕ್ರಮದಲ್ಲಿ ವಿದ್ಯಾಭಾರತಿಯ ದ.ಕ ಜಿಲ್ಲಾ ಅಧ್ಯಕ್ಷರು ಶ್ರೀ ಲೋಕಯ್ಯ ಡಿ ಇವರು ಭಗವದ್ಗೀತೆಯ ಮಹತ್ವವನ್ನು ತಿಳಿಸಿಕೊಟ್ಟರು.





ದ್ವಿತೀಯ ಹಾಗೂ ಅಂತಿಮ ಪದವಿ ವಿದ್ಯಾರ್ಥಿಗಳ ಸಾಂಸ್ಕೃತಿಕ ಕಾರ್ಯಕ್ರಮ ನಗದಿದು ನಗದು(20.12.2021) ಮತ್ತು ವಸುವತ್ಸಲೆ ಭಾರತ(13.12.2021) ಎಂಬ ಹೆಸರಿನಲ್ಲಿ ನಡೆದಿದ್ದು, ಉದ್ಘಾಟನೆಯನ್ನು ಕ್ರಮವಾಗಿ ಶ್ರೀ ರವಿರಾಜ್ ಕಣಂತೂರು ಹಾಗೂ ಶ್ರೀ ಗಣರಾಜ ಭಟ್ ಕೆದಿಲ ನೆರವೇರಿಸಿದರು. ಸಂಸ್ಥೆಯ ಹಿರಿಯರು, ಶಿಕ್ಷಕರು, ಪ್ರಾಚಾರ್ಯರು, ಹಿರಿಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಶಿಕ್ಷಣ ಪ್ರೇಮಿ, ಮಾಜಿ ಶಾಸಕ ಉರಿಮಜಲು ರಾಮ ಭಟ್‌ಗೆ ನುಡಿನಮನ

ವಿವೇಕಾನಂದ ಶಿಕ್ಷಣ ಸಂಸ್ಥೆಗಳ ಪ್ರೇರಕ ಶಕ್ತಿಯಾಗಿದ್ದ ಸ್ವರ್ಗೀಯ ಉರಿಮಜಲು ರಾಮ ಭಟ್ ಅವರಿಗೆ ಸದ್ಗತಿಯನ್ನು ಪ್ರಾರ್ಥಿಸಿ ಸಂಸ್ಥೆಯ ವಿವಿಧ ವಿಭಾಗಗಳಲ್ಲಿ 7.12.21ರಂದು ನುಡಿನಮನ ಸಲ್ಲಿಸಲಾಯಿತು.



ಪ್ರಾಥಮಿಕ ಶಾಲೆಯಲ್ಲಿ ಶ್ರೀ ರವಿರಾಜ್ ಕಣಂತೂರು, ಪ್ರೌಢಶಾಲೆಯಲ್ಲಿ ಶ್ರೀ ಗೋಪಾಲ ಎಂ., ಪದವಿಪೂರ್ವ ವಿಭಾಗದಲ್ಲಿ ಶ್ರೀ ಕರುಣಾಕರ, ಪದವಿ ವಿಭಾಗದಲ್ಲಿ ಶ್ರೀಮತಿ ಜಯಲಕ್ಷ್ಮೀ ಶ್ರದ್ಧಾಂಜಲಿ ಸಲ್ಲಿಸಿದರು. ಎಲ್ಲಾ ವಿಭಾಗದ ಮುಖ್ಯಸ್ಥರು, ಶಿಕ್ಷಕರು, ವಿದ್ಯಾರ್ಥಿಗಳು ಭಾಗವಹಿಸಿ ಅಗಲಿದ ಹಿರಿಯ ಚೇತನಕ್ಕೆ ಕಂಬನಿ ಮಿಡಿದರು.

## ಭಾರತೀಯ ಸೇನಾ ಮುಖ್ಯಸ್ಥ ಬಿಪಿನ್ ರಾವತ್‌ಗೆ ಶ್ರದ್ಧಾಂಜಲಿ

8.12.21ರಂದು ಸೇನಾ ಹೆಲಿಕಾಪ್ಟರ್ ದುರಂತದಲ್ಲಿ ಹುತಾತ್ಮರಾದ CDS ಮುಖ್ಯಸ್ಥ ಜನರಲ್ ಬಿಪಿನ್ ರಾವತ್ ಮತ್ತು ಅಗಲಿದ ಸೇನಾ ತಂಡದವರಿಗೆ ವಿದ್ಯಾಕೇಂದ್ರದ ವಿವಿಧ ವಿಭಾಗಗಳಲ್ಲಿ ಮರುದಿನ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಹಾಗೂ ಅವರ ನಾಲ್ಕು ದಶಕಗಳ ಸೇನಾ ಜೀವನದ ಸ್ಮರಣೆಯನ್ನು ಮಾಡಿಕೊಡಲಾಯಿತು.



ಶ್ರೀ ಸುಮಂತ್ ಆಳ್ವ ಪ್ರಾಥಮಿಕ ಶಾಲೆಯಲ್ಲಿ, ಶ್ರೀ ಕೊಟ್ರೇಶಪ್ಪ ಪ್ರೌಢಶಾಲೆಯಲ್ಲಿ, ಶ್ರೀ ಗಂಧರ್ವ ಪದವಿ ವಿಭಾಗದಲ್ಲಿ ಶ್ರದ್ಧಾಂಜಲಿ ಸಲ್ಲಿಸಿದರು. ಎಲ್ಲಾ ವಿಭಾಗದ ಮುಖ್ಯಸ್ಥರು, ಶಿಕ್ಷಕರು, ವಿದ್ಯಾರ್ಥಿಗಳು ಮೌನಪ್ರಾರ್ಥನೆ ಸಲ್ಲಿಸಿ ಅಗಲಿದ ಆತ್ಮಕ್ಕೆ ಚಿರಶಾಂತಿ ಕೋರಿದರು.

ಶುಭಕೋರುವ : **ಶ್ರೀರಾಮ ಸೌಹಾರ್ದ ಸಹಕಾರಿ ನಿಯಮಿತ**

ಪ್ರಧಾನ ಕಚೇರಿ: ಹನುಮಾನ್ ನಗರ, ಕಲ್ಲಡ್ಕ, ಬಂಟ್ವಾಳ ತಾಲೂಕು, 574222 ದೂ: 8255275173, 8147249174

ಶಾಖೆ : ಶ್ರೀರಾಮ ವಾಣಿಜ್ಯ ಸಂಕೀರ್ಣ ರಾಮನಗರ ಕಲ್ಲಡ್ಕ

ಕಲ್ಲಡ್ಕ ಶ್ರೀರಾಮ ವಾಣಿಜ್ಯ ಸಂಕೀರ್ಣದ ರಾಮ ನಗರ ಶಾಖೆಯಲ್ಲಿ E-Stamping ಠಸೆ ಕಾಗದ ಸೌಲಭ್ಯವಿದೆ

ಚಿನ್ನಾಭರಣ ಸಾಲ – 10.5%
ಜಾಮೀನು ಸಾಲ – 16%
ಅಡವು ಸಾಲ – 13%
ವಾಹನ ಸಾಲ – 11.5%
ಗೃಹ ನಿರ್ಮಾಣ ಸಾಲ – 11%

ಠೇವಣಿ ಮೇಲೆ ಆಕರ್ಷಕ ಬಡ್ಡಿ ದರ
91 ದಿನಗಳವರೆಗೆ – 5.5%
92 ರಿಂದ 181 ದಿನಗಳು – 6%
182ರಿಂದ 364 ದಿನಗಳು – 7%
1 ವರ್ಷ ಮೇಲ್ಪಟ್ಟು – 7.5%

ಸೌಲಭ್ಯಗಳು
ಆವರ್ತನ ಠೇವಣಿ (R.D)
ಸಂಚಯ ಠೇವಣಿ (S.D)
ನಿರಂತರ ಠೇವಣಿ (ಪಿಗ್ಮಿ)

ಹಿರಿಯ ನಾಗರಿಕರಿಗೆ, ಮಾಜಿ ಯೋಧರಿಗೆ ಮತ್ತು ವಿಧವೆಯರಿಗೆ 0.5% ಬಡ್ಡಿ ಹೆಚ್ಚಿಗೆ ನೀಡಲಾಗುವುದು

Postal Regn No. PTR/136/2022-24 Licensed to Post without pre-payment License No: SK/WPP/PTR/117/2022-24

ಸರಯೂ

Vol. : 8 Issue : 8 Rs. 10/-

KARKAN/2014/62363
Posted at Kalladka P.O.
on 10th and 15th of
Every month

SRI RAMA VIDYAKENDRA TRUST (R.) Hanuman Nagar, Kalladka,
Bantwal Tq., Dakshina Kannada, Karnataka 574 222
Website : www.srvk.org E-mail : info@srvk.org

BOOK POST

ಸವಿಧೇ,

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 9449728763 Printed at Digantha Mudrana Ltd. Magaluru 575008, Bantwal Tq., Dakshina Kannada, Karnataka. Registration No. : KARKAN/2014/62363